## 2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 595 / 2021

**ಪಿರ್ಯಾದುದಾರರು :** ತಾವರೆಕೆರೆ ಪೋಲಿಸ್ ಠಾಣೆ

**ವಿರುದ್ಧ**

**ಆರೋಪಿ :** **ದಯಾನಂದ ಆರ್ ಬಿನ್ ರಂಗಸ್ವಾಮಯ್ಯ,**
ಸುಮಾರು 29 ವರ್ಷಗಳು,
ವಾಸಃ ನಂ.139, ಮೋಟಗೊಂಡನಹಳ್ಳಿ,
ಸೋಲೂರು ಹೋಬಳಿ, ಹೊಸಹಳ್ಳಿ,
ಮಾಗಡಿ ತಾಲ್ಲೂಕು.

## ಆಪಾದನೆ

( ರಂಜಿತ ಜಿ.ಬಿ, 2 ನೇ ಅಪರ ನ್ಯಾಯಿಕ ದಂಡಾಧಿಕಾರಿಯಾದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ಆಪಾದನೆಯನ್ನು ಮಾಡುತ್ತಿದ್ದೇನೆ )

**ಆರೋಪಿ ದಯಾನಂದ ಆದ ನೀವು**

ದಿನಾಂಕ 01-11-220 ರಂದು ರಾತ್ರಿ 8.30 ಗಂಟೆಯ ಸಮಯದಲ್ಲಿ ತಾವರೆಕೆರೆ ಪೋಲಿಸ್ ಠಾಣಾ ಸರಹದ್ದು, ಚುಂಚನಕುಪ್ಪೆ-ದೊಡ್ಡಲದಮರ ರಸ್ತೆಯ ನಡುವೆ ಇರುವ ಪೆಗಾಸಸ್ ಬ್ರೀಜ್ ಲೇಔಟ್ ಮುಂಭಾಗ ಆರೋಪಿ ಕೆಎ-02-ಎಹೆಚ್-0162 ಟಿಪ್ಪರ್ ಲಾರಿ ಚಾಲಕ ಲಾರಿಯನ್ನು ಯಾವುದೇ ಸಂಚಾರಿ ನಿಯಮಗಳನ್ನು ಪಾಲಿಸದೇ ಸಿಗ್ನಲ್ ಲೈಟ್ಸ್ ಹಾಕದೇ, ಬ್ಯಾರಿಕೇಡ್ಸ್ ಹಾಕದೇ ಮುನ್ಸೂಚನೆಗಾರಿ ಲಾರಿ ಚಾಲಕ ರಸ್ತೆಯಲ್ಲಿ ನಿಂತು ರಸ್ತೆಯಲ್ಲಿ ಬರುವ ವಾಹನಗಳಿಗೆ ಯಾವುದೇ ಸಿಗ್ನಲ್ ಗಳನ್ನು ತೋರಿಸದೇ, ಅಜಾಗರೂಕತೆಯಿಂದ ಲಾರಿಯನ್ನು ರಸ್ತೆ ಮಧ್ಯದಲ್ಲಿ ಕತ್ತಲೆಯಲ್ಲಿ ನಿಲ್ಲಿಸಿದ್ದು, ನೀವು ಮಾನವನ ಜೀವಕ್ಕೆ ಹಾನಿ ಉಂಟಾಗುವ ರೀತಿಯಲ್ಲಿ ರಸ್ತೆಯಲ್ಲಿ ವಾಹನವನ್ನು ನಿಲ್ಲಿಸಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-279 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಎರಡನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ಅಪಘಾತದ ಪರಿಣಾಮ ವಾಹನವನ್ನು ರಸ್ತೆಯಲ್ಲಿ ನಿಲ್ಲಿಸಿದ್ದಾಗ, ಆನಂದ ಎಂಬುವವರು ಕೆಎ-02 ಹೆಚ್.ಪಿ-7125 ಹಿರೋ ಹೊಂಡಾ ಬೈಕಿನಲ್ಲಿ ಚಾಸಾ-1 ರವರನ್ನು ಕೂರಿಸಿಕೊಂಡು ದೊಡ್ಡಾಲದ ಮರದ ಕಡೆಗೆ ಬರುತ್ತಿದ್ದಾಗ ಎದುರಿನಿಂದ ಯಾವುದೋ ಲಾರಿ

ಬರುತ್ತಿದ್ದು, ಅದರ ಬೆಳಕಿನಲ್ಲಿ ಮೃತ ಆನಂದ ಜಿಗಳಿ ರಸ್ತೆ ಮಧ್ಯೆ ನಿಂತಿದ್ದ ಲಾರಿಯ ಹಿಂಬದಿಯ ಬಲಭಾಗಕ್ಕೆ ಡಿಕ್ಕಿ ಹೊಡೆಸಿದ್ದರ ಪರಿಣಾಮ ಮೋಟಾರು ಸೈಕಲ್ ಚಾಲಕ ಆನಂದ್ ಜಿಗಚಿರವರ ಹಣೆಯ ಹಣೆಯ ಬಲಬಾಗಕ್ಕೆ ಏಟು ಬಿದ್ದಿದ್ದು, ಮತ್ತು ಚಾಸಾ-1 ರವರ ದವಡೆಗೆ ತೀವ್ರ ಸ್ವರೂಪದ ಬಲಗೈಗೆ ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-338 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಕೊನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಅದೇ ಸಮಯದಲ್ಲಿ ಅಪಘಾತದ ಪರಿಣಾಮ ವಾಹನವನ್ನು ರಸ್ತೆಯಲ್ಲಿ ನಿಲ್ಲಿಸಿದ್ದಾಗ, ಆನಂದ ಎಂಬುವವರು ಕೆಎ-02 ಹೆಚ್.ಪಿ-7125 ಹಿರೋ ಹೊಂಡಾ ಬೈಕಿನಲ್ಲಿ ಚಾಸಾ-1 ರವರನ್ನು ಕೂರಿಸಿಕೊಂಡು ದೊಡ್ಡಾಲದ ಮರದ ಕಡೆಗೆ ಬರುತ್ತಿದ್ದಾಗ ಎದುರಿನಿಂದ ಯಾವುದೋ ಲಾರಿ ಬರುತ್ತಿದ್ದು, ಅದರ ಬೆಳಕಿನಲ್ಲಿ ಮೃತ ಆನಂದ ಜಿಗಳಿ ರಸ್ತೆ ಮಧ್ಯೆ ನಿಂತಿದ್ದ ಲಾರಿಯ ಹಿಂಬದಿಯ ಬಲಭಾಗಕ್ಕೆ ಡಿಕ್ಕಿ ಹೊಡೆಸಿದ್ದರ ಪರಿಣಾಮ ಮೋಟಾರು ಸೈಕಲ್ ಚಾಲಕ ಆನಂದ್ ಜಿಗಚಿರವರ ಹಣೆಯ ಹಣೆಯ ಬಲಬಾಗಕ್ಕೆ ಗಲ್ಲಕ್ಕೆ, ತುಟಿಗೆ, ಎಡಕೆನ್ನೆಗೆ ಹಾಗೂ ಎದೆಗೆ ಏಟು ಬಿದ್ದದ್ದು, ರಕ್ತಗಾಯವಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮರ್ಗ ಮಧ್ಯೆ ಮೃತಪಟ್ಟಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-304-ಎ ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಪ್ರಶ್ನೆ-1 ಃ ನೀವು ಈ ಮೇಲಿನ ಆಪಾದನೆಯನ್ನು ಕೇಳಿದಿರಾ ?

ಉತ್ತರ ಃ

ಪ್ರಶ್ನೆ-2 ಃ ನೀವು ಆಪಾದನೆಯನ್ನು ಒಪ್ಪುಕೊಳ್ಳುತ್ತೀರಾ ಅಥವಾ ಏನಾದರೂ ಹೇಳುವುದಿದೇಯಾ?

ಉತ್ತರ ಃ

ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 01-04-2023 ರಂದು ಸಹಿ ಮಾಡಿರುತ್ತಾರೆ )

( ರಂಜಿತ ಜಿ.ಬಿ )
2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.

ಆರೋಪಿಯ ಸಹಿಃ